# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 370
ಸದಸ್ಯರ ಹೆಸರು : ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 13.08.2025
ಉತ್ತರಿಸುವ ಸಚಿವರು : ಕಂದಾಯ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಭೂಮಿ ನೀಡಿಕೆ ನಿಯಮಗಳು 1969 ರನ್ವಯ (Karnataka Land Grant Rules) ಗುತ್ತಿಗೆ ಅವಧಿಯ ಮಾನದಂಡಗಳೇನು; ಸದರಿ ಗುತ್ತಿಗೆ ಅವಧಿಯು 10 ವರ್ಷಗಳು ಮೀರಿದ್ದಲ್ಲಿ ಸರ್ಕಾರದ ಪೂರ್ವಾನುಮತಿ ಪಡೆಯಬೇಕು ಮತ್ತು ಭೂಮಿಯನ್ನು ಯಾವ ಉದ್ದೇಶಕ್ಕಾಗಿ ಬಳಸಲಾಗಿದೆ ಎಂಬುದನ್ನು ಗಣನೆಗೆ ತೆಗೆದುಕೊಂಡು ಭೂಮಿಗೆ ಪಾವತಿಸಬೇಕಾದ ಬಾಡಿಗೆಯನ್ನು ನಿಗಧಿಗೊಳಿಸಬೇಕೆಂಬುದು ಸರ್ಕಾರದ ಗಮನದಲ್ಲಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು: | ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 19ರಲ್ಲಿ ಭೂಮಿಗಳನ್ನು ಗುತ್ತಿಗೆ ನೀಡುವುದಕ್ಕೆ ಅವಕಾಶ ಕಲ್ಪಿಸಲಾಗಿದೆ.<br><br>ನಿಯಮ 19 (3) (ಎ) ರಡಿ ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿ ಇಲ್ಲದೇ ಹತ್ತು ವರ್ಷಗಳಿಗಿಂತ ಹೆಚ್ಚಾಗಿರತಕ್ಕದ್ದಲ್ಲ; ಮತ್ತು<br><br>(ಬಿ) ಇತರೆ ಸಂದರ್ಭಗಳಲ್ಲಿ ಹತ್ತು ವರ್ಷಗಳಿಗಿಂತ ಕಡಿಮೆ ಮತ್ತು ಮೂವತ್ತು ವರ್ಷಗಳಿಗಿಂತ ಹೆಚ್ಚಾಗಿ ಇರತಕ್ಕದ್ದಲ್ಲ:<br><br>ಪರಂತು, ಈ ಅವಧಿಯು ಮುಕ್ತಾಯವಾದ ತರುವಾಯ, ಗುತ್ತಿಗೆಯನ್ನು ಇನ್ನೂ ಹೆಚ್ಚಿನ ಐದು ವರ್ಷಗಳ ಅವಧಿಯವರೆಗೆ ನವೀಕರಿಸಲು ಜಿಲ್ಲಾಧಿಕಾರಿಗೆ ಅಧಿಕಾರವಿರುತ್ತದೆ.<br><br>ಮುಂದುವರೆದು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 19 ರಿಂದ 22ರವರೆಗಿನ ನಿಯಮಗಳ ಪ್ರಕಾರ ಸರ್ಕಾರಿ ಭೂಮಿಯನ್ನು ಮಂಜೂರು ಮಾಡುವಾಗ / ಗುತ್ತಿಗೆ ಕೊಡುವಾಗ ಏಕರೂಪದ ಮಾರುಕಟ್ಟೆ ಮೌಲ್ಯ/ ಮಾರ್ಗಸೂಚಿ ಮೌಲ್ಯವನ್ನು ನಿಗದಿಪಡಿಸಲು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 22-ಎ (1) (i)ರಲ್ಲಿ ವಿವರಿಸಲಾಗಿದೆ. |
| ಆ) | ಗುಂಜೂರು ಗ್ರಾಮದಲ್ಲಿ (ಬೆಂಗಳೂರು ವರ್ತೂರು ಹೋಬಳಿ) 6 ಎಕರೆ ಭೂಮಿಯನ್ನು ಮೆ:ಗುಂಜೂರು ಕ್ಲಬ್‌ಗೆ 30 ವರ್ಷಗಳಿಗೆ 22ನೇ ಮೇ 2013 ರಿಂದ ಗುತ್ತಿಗೆ ನೀಡಲು 22ನೇ ಡಿಸೆಂಬರ್, 2012 ರಂದು ಸರ್ಕಾರವು ಅನುಮೋದಿಸಿರುವುದು ಸರ್ಕಾರದ | ಸರ್ಕಾರದ ಆದೇಶ ಸಂಖ್ಯೆ:ಆರ್.ಡಿ. 258 ಎಲ್.ಜಿ.ಬಿ 2012, ದಿನಾಂಕ:22/12/2012 ರಂತೆ ಗುಂಜೂರು ಗ್ರಾಮದ ಸರ್ವೆ ನಂ.71 ಮತ್ತು 72 ರಲ್ಲಿನ 6-00 ಎಕರೆ/ಗುಂಟೆ ಜಮೀನನ್ನು ಗುಂಜೂರು ಕ್ಲಬ್ ರವರಿಗೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ರ ನಿಯಮ 19(1) ಮತ್ತು 19(3) ರನ್ವಯ ಪ್ರಚಲಿತ ಮಾರುಕಟ್ಟೆ ದರದ ಮೇಲೆ ಪ್ರತಿ ಒಂದು ಎಕರೆಗೆ 60 ಲಕ್ಷಗಳಿದ್ದು, ಈ ದರದ ಮೇಲೆ ಶೇ.10% ರಷ್ಟನ್ನು |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | ಗಮನದಲ್ಲಿದೆಯೇ; ಎಕರೆ ಒಂದಕ್ಕೆ ರೂ.6.00 ಲಕ್ಷದಂತೆ ಪ್ರತಿ 2 ವರ್ಷಗಳಿಗೆ ಒಂದು ಸಲ ಶೇಕಡ 10 ರಂತೆ ಹೆಚ್ಚಿಸುವ ಷರತ್ತಿನೊಂದಿಗೆ ನಿಗದಿಪಡಿಸಿರುವುದು ಸರ್ಕಾರದ ಗಮನದಲ್ಲಿದೆಯೇ? | ವಿಧಿಸಿ ಆ ಮೊತ್ತವನ್ನು ಪ್ರತಿ ಎರಡು ವರ್ಷಗಳಿಗೊಮ್ಮೆ ಶೇ.10% ರಷ್ಟು ಗುತ್ತಿಗೆ ದರವನ್ನು ಹೆಚ್ಚಿಸುವ ಷರತ್ತು ವಿಧಿಸಿ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಸಚಿವ ಸಂಪುಟದ ನಿರ್ಣಯದಂತೆ ಮಂಜೂರು ಮಾಡಲಾಗಿರುತ್ತದೆ. |
| ಇ) | ಅವಧಿಯು ಮುಗಿದು ಹೋಗಿದ್ದ ಮೊದಲ ವರ್ಷದ ಗುತ್ತಿಗೆ ಅವಧಿಗೆ ವರ್ಷ ಒಂದಕ್ಕೆ ರೂ.24.00 ಲಕ್ಷ (ಎಕರೆ ಒಂದಕ್ಕೆ ರೂ.4.00 ಲಕ್ಷದಂತೆ 6 ಎಕರೆಗೆ) ಮೊತ್ತದ ರಾಜಸ್ವ ನಷ್ಟವಾಗಿದ್ದು, ಇದರಿಂದಾಗಿ ಗುತ್ತಿಗೆ ಅವಧಿಯಲ್ಲಿ ಸರ್ಕಾರಕ್ಕೆ ಪುನರಾವರ್ತಕ ನಷ್ಟ (Recurring Loss) ಸಂಭವಿಸಲಿದ್ದು, ಮಾರ್ಗಸೂಚಿ/ಮಾರುಕಟ್ಟೆ ಬೆಲೆ ಪ್ರಕಾರ ಬಾಡಿಗೆಯನ್ನು ಪರಿಷ್ಕರಿಸದೇ ಇದ್ದಲ್ಲಿ ಸಂಪೂರ್ಣ ಗುತ್ತಿಗೆ ಅವಧಿಯಲ್ಲಿ ಸರ್ಕಾರಕ್ಕೆ ಸಂಭವಿಸುವ ನಷ್ಟದ ಅಂದಾಜು ಮಾರ್ಗಸೂಚಿ/ಮಾರುಕಟ್ಟೆ ಬೆಲೆ ಪ್ರಕಾರ ಬಾಡಿಗೆಯನ್ನು ಪರಿಷ್ಕರಿಸುವ ನಿಟ್ಟಿನಲ್ಲಿ ಸರ್ಕಾರದ ಮುಂದಿನ ಕ್ರಮಗಳೇನು; ಮತ್ತು ಕಾಲಮಿತಿ ಎಷ್ಟು? | ಸದರಿ ಗುತ್ತಿಗೆ ನೀಡಿದ್ದ ಜಮೀನಿಗೆ ಸಂಬಂಧಿಸಿದಂತೆ ಮಹಾಲೇಖಪಾಲರ ಅಡಿಟ್ ಆಕ್ಷೇಪಣೆಯಂತೆ ಒಟ್ಟು 6-00 ಎಕರೆ/ಗುಂಟೆ, ಪ್ರತಿ ಒಂದು ಎಕರೆಗೆ ಮಾರುಕಟ್ಟೆ ದರ ರೂ 1.00 ಕೋಟಿಗಳಂತೆ ಇದ್ದು, ಶೇಕಡ 10% ರಂತೆ ರೂ. 36,00,000-00 ಗಳನ್ನು ಮಾತ್ರ ಪಾವತಿಸಿದ್ದು, ರೂ 24,00,000-00 ಲಕ್ಷಗಳನ್ನು ಕಡಿಮೆ ಪಾವತಿಸಿಕೊಂಡಿರುವುದಾಗಿ ಮತ್ತು ಸದರಿ ಜಮೀನಿಗೆ ವ್ಯವಸಾಯೇತರ ಉದ್ದೇಶಕ್ಕೆ ಭೂಪರಿವರ್ತನೆ ಶುಲ್ಕ ರೂ. 10,46,000-00 ಗಳನ್ನು ಪಾವತಿಸಲು ಗುಂಜೂರು ಕ್ಲಬ್ ರವರಿಗೆ ಜಿಲ್ಲಾಧಿಕಾರಿಗಳವರ ಕಛೇರಿಯಿಂದ ದಿನಾಂಕ:15/07/2014 ರಂದು ತಿಳುವಳಿಕೆ ನೀಡಲಾಗಿದ್ದು, ಸದರಿ ಕ್ಲಬ್ ರವರು ಖಜಾನೆ ಕೋಡ್ ನಂ: 01030008 ರಂತೆ 24,00,000-00 ರೂ ಹಾಗೂ ಭೂಪರಿವರ್ತನೆ ಶುಲ್ಕ 10,46,000-00 ರೂಗಳನ್ನು ಪಾವತಿಸಿರುತ್ತಾರೆ.<br><br>ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ ಸಭೆಯಲ್ಲಿ ಸದರಿ ಗುತ್ತಿಗೆ ಮಂಜೂರಿಗೆ ಸಂಬಂಧಿಸಿದಂತೆ ಆಡಿಟ್ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿರುವಂತೆ ಗುಂಜೂರು ಕ್ಲಬ್ ರವರಿಂದ ಬಾಕಿ ಇರುವ 6,58,55,200 ರೂ. ಗಳನ್ನು ಪಾವತಿಸಲು ದಿನಾಂಕ:29-01-2022 ಮತ್ತು 15-09-2023 ಹಾಗೂ 10-10-2023 ರಂತೆ ಕಾರ್ಯದರ್ಶಿಗಳು ಗುಂಜೂರು ಕ್ಲಬ್ ರವರಿಗೆ ನೋಟೀಸ್ ನೀಡಲಾಗಿರುತ್ತದೆ. ಸದರಿ ಗುಂಜೂರು ಕ್ಲಬ್ ರವರು ಚೆಕ್ ನಂ.000190 ರಂತೆ ರೂ.8,04,650/- ಗುತ್ತಿಗೆ ಮೊತ್ತವನ್ನು ಪಾವತಿಸುವುದಾಗಿ ಚೆಕ್‌ನೊಂದಿಗೆ ಜಿಲ್ಲಾಧಿಕಾರಿ ಕಛೇರಿಗೆ ದಿನಾಂಕ:23-11-2023 ರಂದು ಮನವಿಯನ್ನು ಸಲ್ಲಿಸಿ, ದಿನಾಂಕ:10-10-2023 ರಂದು ಹೊರಡಿಸಿರುವ ನೋಟೀಸ್‌ನ್ನು ರದ್ದುಗೊಳಿಸಲು ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಏತನ್ಮಧ್ಯೆ ಗುಂಜೂರು ಕ್ಲಬ್ ರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸರ್ಕಾರ, ಜಿಲ್ಲಾಧಿಕಾರಿಗಳು ಹಾಗೂ ತಹಶೀಲ್ದಾರ್ ರವರುಗಳನ್ನು ಪ್ರತಿವಾದಿಗಳನ್ನಾಗಿ ಮಾಡಿ, ಡಬ್ಲ್ಯೂಪಿ 24849/2023 ರಂತೆ ಪ್ರಕರಣ ದಾಖಲಿಸಿದ್ದು, ದಿನಾಂಕ:10-11-2023 ರಂದು ಮಾನ್ಯ ನ್ಯಾಯಾಲಯವು, "Respondent No. is restrained from taking any coercive action against the petitioner, till the next date of hearing" ಎಂದು ಆದೇಶಿಸಿದ್ದು, ಸದರಿ ಪ್ರಕರಣಕ್ಕೆ ಕಂಡಿಕೆವಾರು ಉತ್ತರವನ್ನು ಸಲ್ಲಿಸಲಾಗಿದೆ. ಮಾನ್ಯ ನ್ಯಾಯಾಲಯವು: ದಿನಾಂಕ:16-07-2025 ರಂದು ಅಂತಿಮ ಆದೇಶ ಹೊರಡಿಸಿರುತ್ತದೆ. ಸದರಿ ಆದೇಶದಲ್ಲಿ "In that view of the matter without expressing any opinion on the veracity of the petitioner herein seeing benefit of Rule 22-A of the Rule 1969, the respondent–authorities shall not take any precipitative action against the petitioner herein, till the consideration of the reply that may be filed by the petitioner as stated above. It is also to be noted that since, the cheque bearing no.000190 drawn on Bank of Baroda dated22-11-2023 has not be realized by the respondent- authorities, petitioner is directed to issue on more cheque with regard to the same within one week from the date of receipt of this order" ಎಂದು ಆದೇಶವಾಗಿರುತ್ತದೆ.<br><br>ದಿನಾಂಕ:22-11-2023 ರಂದು ಗುಂಜೂರು ಕ್ಲಬ್ ರವರು ರೂ.8,04,650/- ಗಳಿಗೆ ನೀಡಲಾಗಿದ್ದ ಚೆಕ್‌ನ್ನು ನಗದೀಕರಣ ಮಾಡಿಕೊಂಡಿರುವುದಿಲ್ಲವಾದ್ದರಿಂದ ಹಾಗೂ ಕರ್ನಾಟಕ ಭೂ ಮಂಜೂರಾತಿ ನಿಯಮ 1969 ರ ಕಲಂ 19, 22ಎ ರಡಿ ವ್ಯವಸಾಯೇತರ ಉದ್ದೇಶಕ್ಕೆ ಮಾರ್ಗಸೂಚಿ ಬೆಲೆಯ ಶೇ.2.5% ರಷ್ಟು ಮೊತ್ತವನ್ನು ಪ್ರಕರಣದ ವಾದಿಗಳಿಗೆ ಪಾವತಿಸಲು ನಿರ್ದೇಶಿಸಿದ್ದು, ಪ್ರಕರಣದ ಅಂತಿಮ ಆದೇಶವಾದ ಮೂರು ವಾರಗಳೊಳಗಾಗಿ ಸದರಿ ಗುಂಜೂರು ಕ್ಲಬ್ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ರವರು ನೀಡುವ ಮನವಿ (ಮೊತ್ತ ಪಾವತಿಯ ಕುರಿತು) ಯನ್ನು ಪರಿಗಣಿಸಲು ನಿರ್ದೇಶಿಸಿದ್ದು, ಈ ವಿಚಾರದಲ್ಲಿ ದಿನಾಂಕ:23-07-2025 ರಂದು ಗುಂಜೂರು ಕ್ಲಬ್ ರವರು ಮತ್ತೊಮ್ಮೆ ಚೆಕ್‌ನೊಂದಿಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ:16-07-2025 ರ ಆದೇಶದ ಕುರಿತು ಕಾನೂನು ಇಲಾಖೆಯ ಅಭಿಪ್ರಾಯ ಪಡೆದು ನಿಯಮಾನುಸಾರ ಮುಂದಿನ ಕ್ರಮವಹಿಸಲಾಗುವುದು. |

ಸಂಖ್ಯೆ: ಆರ್‌ಡಿ 89 ಎಲ್‌ಜಿಕ್ಯೂ 2025

**(ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**